# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

*(ಕರ್ನಾಟಕ ಸರ್ಕಾರ ಸ್ವಾಮ್ಯಕ್ಕೆ ಒಳಪಟ್ಟಿದೆ)*

ದೂರವಾಣಿ : 08221-224020
E-mail:aeedevanur@gmail.com

ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿ)
ಕಾ ಮತ್ತು ಪಾ. ಉಪ-ವಿಭಾಗ-2,
ಚಾವಿಸನಿನಿ, ಆರ್.ಪಿ.ರಸ್ತೆ, ನಂಜನಗೂಡು.

ಸಂಖ್ಯೆ:ಸಕಾನಿಇಂ(ವಿ)/ಸ.ಇಂ(ತಾಂ)/ನಂ.ಗೂಡು/2017-18: 1536-38 ದಿನಾಂಕ: 18.11.17

**ಸಭಾ ನಡಾವಳಿ:**

ಮೇಲಿನ ಉಲ್ಲೇಖದ ಅದೇಶದನ್ವಯ ದಿನಾಂಕ: 03.11.2017 ರಂದು ಅಧೀಕ್ಷಕ ಇಂಜಿನಿಯರ್(ವಿ), ಕಾ & ಪಾ ವೃತ್ತ, ಮೈಸುರು ರವರ ಅಧ್ಯಕ್ಷತೆಯಲ್ಲಿ, ನಂಜನಗೂಡು ಕಾರ್ಯ ಮತ್ತು ಪಾಲನಾ ಉಪವಿಭಾಗ 2 ರ ಆವರಣದಲ್ಲಿ ನಡೆದ ಗ್ರಾಹಕರ ಕುಂದು ಕೊರತೆ ಸಭೆಯ ನಡಾವಳಗಳು.

**ಹಾಜರಿದ್ದ ಅಧಿಕಾರಿ/ನೌಕರರು/ಸದಸ್ಯರು**

1. ಶ್ರೀಯುತ ನರಸಿಂಹ ಗೌಡ, ಅಧೀಕ್ಷಕ ಇಂಜಿನಿಯರ್(ವಿ), ಕಾ & ಪಾ ವೃತ್ತ. ಮೈಸೂರು
2. ಶ್ರೀಯುತ ಸುನಿಲ್ ಕುಮಾರ್.ಎ.ಎ , ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಂಜನಗೂಡು ವಿಭಾಗ.
3. ಶ್ರೀಯುತ ಶ್ರೀಧರ್, ಸಹಾಯಕ ಕಾರ್ಯನಿರ್ವಾಹ ಇಂಜಿನಿಯರ್(ವಿ), ನಂಜನಗೂಡು ಉಪವಿಭಾಗ-2.
4. ಶ್ರೀಮತಿ ಶೈಲಜ.ಬಿ, ಸಹಾಯಕ ಇಂಜಿನಿಯರ್(ತಾ), ನಂಜನಗೂಡು ಉಪವಿಭಾಗ-2.
5. ಶ್ರೀಯುತ ಸಂತೋಷ್ ಕುಮಾರ್ ಕಿರಿಯ ಇಂಜಿನಿಯರ್(ವಿ), ಹುಲ್ಲಹಳ್ಳಿ ಶಾಖೆ.
6. ಶ್ರೀಯುತ ಕಿಶೋರ್.ಈ, ಕಿರಿಯ ಇಂಜಿನಿಯರ್(ವಿ), ಚಂದ್ರವಾಡಿ ಶಾಖೆ.
7. ಶ್ರೀಯುತ ನಾಗರಾಜು, ಕಿರಿಯ ಇಂಜಿನಿಯರ್(ವಿ), ಹುರ ಶಾಖೆ.
8. ಶ್ರೀಯುತ ಮಂಜು.ಬಿ, ಕಿರಿಯ ಇಂಜಿನಿಯರ್(ವಿ), ಬದನವಾಳು ಶಾಖೆ. .
9. ಶ್ರೀಯುತ ಮಹದೇವಯ್ಯ, ಕಿರಿಯ ಇಂಜಿನಿಯರ್(ವಿ), ತಗಡೂರು ಶಾಖೆ.
10. ಶ್ರೀಯುತ ಕೆ.ಬಿ.ಸೂರ್ಯಕುಮಾರ ಕಣ್ಣೇನೂರು ಗ್ರಾಮ.

ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ಮೈಸೂರು ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

**1. ಶ್ರೀಯುತ ಕೆ.ಪಿ.ರಾಜಪ್ಪ ಕಾಹಳ್ಳಿ –ಮೊ.ಸಂ: 9731264354. ರವರು ಮಾತನಾಡಿ .**

* ತಮ್ಮ ಮನೆಯು ಊರಿನಿಂದ ಹೊರಗಡೆ ಇದ್ದು, ಕರೆಂಟ್ ಇರುವುದಿಲ್ಲ. ಆದ್ದರಿಂದ ಕರೆಂಟ್ ಒದಗಿಸಿ ಕೊಡಿ ಎಂದು ಕೋರಿದರು.

➢ *ಊರಿನಿಂದ ಹೊರಗಡೆ ಇರುವ ಮನೆಗಳಿಗೆ ನಿಗಮದ ವತಿಯಿಂದ ನಿರಂತರ ಜ್ಯೋತಿ ವಿದ್ಯುತ್ ಒದಗಿಸಲು ಸಾಧ್ಯವಿರುವುದಿಲ್ಲ. ಹಾಗೂ ಈ ಸ್ಥಾವರಗಳಿಗೆ ನಿರಂತರ ವಿದ್ಯುತ್ ಸಂಪರ್ಕವನ್ನು ಸ್ವಯಂ ನಿರ್ವಹಣೆ ಕಾಮಗಾರಿ ಅಡಿಯಲ್ಲಿ ಪಡೆಯುವಂತೆ ಸೂಚಿಸಲಾಯಿತು.*

**2. ಶ್ರೀಯುತ ವಿ.ಎಸ್.ಮಹದೇವಸ್ವಾಮಿ, ಒಳಗೆರೆ, ಮೊ.ಸಂ: 9844384071 ರವರು ಮಾತನಾಡಿ,**

* ಕೆಲವು ಕಂಬಗಳು ರಸ್ತೆ ಮಧ್ಯದಲ್ಲಿರುತ್ತವೆ ಮತ್ತು ಒಳಗೆರೆ ಊರಿನ ಒಳಗಡೆ ಇರುವ ಕೆಲವು ಕಂಬಗಳು ಶಿಥಿಲಗೊಂಡಿವೆ. ಇವುಗಳನ್ನು ಬದಲಿಸಿಕೊಡಿ ಎಂದು ಕೋರಿದರು.

**(ಕ್ರಮ :ಶಾಖಾಧಿಕಾರಿ, ಹುಲ್ಲಹಳ್ಳಿ)**

3. **ಶ್ರೀಯುತ ಸುರೇಶ್, ಬಸವಟ್ಟಿಗೆ ಮೊ.ಸಂ 9901222673 ರವರು ಮಾತನಾಡಿ,**

* ಬಸವಟ್ಟಿಗೆ ಗ್ರಾಮದ ದೇವಸ್ಥಾನದ ಬಳಿ ಇರುವ ಐ.ಪಿ.ಸೆಟ್ ಪರಿವರ್ತಕವು ಸಿಂಗಲ್ ಫೇಸ್ ಆಗಿದೆ, ಇದನ್ನು ಸರಿಪಡಿಸಿಕೊಡಿ ಎಂದು ಕೋರಿದರು.

**(ಕ್ರಮ :ಶಾಖಾಧಿಕಾರಿ, ಬದನವಾಳು)**

4. **ಶ್ರೀಯುತ ಮಲ್ಲೇಶ್ ಚುಂಚನಹಳ್ಳಿ, ಮೊ.ಸಂ 9620647007 ಗ್ರಾಮ. ರವರು ಮಾತನಾಡಿ,**

* ಗೀಕಳ್ಳಿಯಿಂದ ಕೊಳ್ಳೇಗಾಲ ರಿಂಗ್ ರೋಡ್‌ವರೆಗೆ ರಸ್ತೆ ಡಾಂಬರೀಕರಣ ನಡೆಯುತ್ತಿದ್ದು, ರಸ್ತೆ ಅಗಲೀಕರಣಗೊಳಿಸುವ ಸಮಯದಲ್ಲಿ, ರಸ್ತೆ ಬದಿಯಲ್ಲಿದ್ದ ವಿದ್ಯುತ್ ಕಂಬಗಳನ್ನು ರೈತರ ಜಮೀನಿಗೆ ಕಂಬಗಳನ್ನು ಸ್ಥಳಾಂತರಿಸಲಾಗಿದೆ. ನನ್ನ ಜಮೀನಿನ (415 ನೇ ಸರ್ವೇನಂಬರ್‌ನಲ್ಲಿ) ಕಂಬಗಳನ್ನು ಸ್ಥಳಾಂತರ ಮಾಡಿದ್ದಾರೆ. ಹಾಗೂ ಜಮೀನಿನಲ್ಲಿದ್ದ ಮರಗಳನ್ನು ಕಡಿಯಲಾಗಿದೆ. ಇದರ ಬಗ್ಗೆ ರೈತರಿಗೆ ಮಾಹಿತಿ ನೀಡಿರುವುದಿಲ್ಲ, ಮರಗಳನ್ನು ಕಡಿಯುವ ಮುನ್ನ ರೈತರಿಗೆ ತಿಳಿಸಬೇಕು ಅಥವಾ ಪರಿಹಾರ ಕೊಡಿಸಿ ಸೂಕ್ತ ಕ್ರಮಗಳನ್ನು ಅನುಸರಿಸಲು ಕೋರಿದರು.

**(ಕ್ರಮ: ಶಾಖಾಧಿಕಾರಿ, ಬದನವಾಳು. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಂಜನಗೂಡು ಉಪವಿಭಾಗ 2)**

5. **ಶ್ರೀಯುತ ಕೆಂಡಗಣ್ಣಪ್ಪ, ಹಗಿನವಾಳು ಮೊ.ಸಂ 9916693559 ರವರು ಮಾತನಾಡಿ,**

* ವಳಗೆರೆಯಿಂದ ಹಗಿನವಾಳಿಗೆ ಹೋಗುವ ರಸ್ತೆಯಲ್ಲಿ ಪ್ರೈಮರಿ ಮಾರ್ಗವು ಮರಗಳಿಗೆ ತಾಗುತ್ತಿದೆ

* ಹಗಿನವಾಳು ಗ್ರಾಮದ ಕೆರೆ ಏರಿ ಪಕ್ಕ ನೀರಿನ ತೊಟ್ಟಿ ಇರುವ ಜಾಗದಲ್ಲಿ ಕಂಬ ಶಿಥಿಲವಾಗಿದೆ ಅದನ್ನು ಸರಿಪಡಿಸಬೇಕು.

* ಹಗಿನವಾಳು ಬಸ್ ಸ್ಟಾಂಡ್‌ನ ಕೆಲಸ ಅರ್ಧ ಮುಗಿದಿದ್ದು ಇನ್ನು ಮುಂದೆ ಕಟ್ಟಡ ಮುದುವರಿಸಬೇಕಾದರೆ, ಇದರ ಮೇಲೆ ಪ್ರೈಮರಿ ಮಾರ್ಗ ಹೋಗಿದೆ. ಈ ಮಾರ್ಗವನ್ನು ಬದಲಾಯಿಸಿ ಕೊಡಿ ಎಂದು ಕೋರಿದರು.

**(ಕ್ರಮ :ಶಾಖಾಧಿಕಾರಿ, ಹುಲ್ಲಹಳ್ಳಿ)**

6. **ಶ್ರೀಯುತ ಹೆಚ್.ಎಸ್.ಮಹದೇವ ಹಳೇಪುರ ಮೊ.ಸಂ 9945218845 ರವರು ಮಾತನಾಡಿ,**

*ಹಳೇಪುರ ಗ್ರಾಮದ ಬೀದಿ ದೀಪಗಳಿಗೆ ಕಂಟ್ರೋಲ್ ಅಳವಡಿಸಿಕೊಡಿ ಎಂದು ಕೋರಿದರು.

* ಹಳೇಪುರ ಗ್ರಾಮದ ಶಾಲೆಯ ಹತ್ತಿರ ಪರಿವರ್ತಕ ಹಾಗೂ ಉಪ್ಪಾರ ಹೊಸ ಬಡಾವಣೆ ಪರಿವರ್ತಕವನ್ನು ಬದಲಾಯಿಸ ಕೊಡಬೇಕು.

* ಹಳೇಪುರದಲ್ಲಿ ಶ್ರೀನಿವಾಸನ ಅಂಗಡಿಗೆ ಹತ್ತಿರ ಕಂಬ ಶಿಥಿಲವಾಗಿದೆ ಅದನ್ನು ಸರಿಪಡಿಸಲು ಕೋರಿದರು.

➢ *ಬೀದಿ ದೀಪಗಳ ನಿರ್ವಹಣೆ ಕಾರ್ಯವು ಪಂಚಾಯತಿ ವ್ಯಾಪ್ತಿಗೆ ಒಳಪಡುವುದರಿಂದ, ಪಂಚಾಯತಿಯವರೇ ಬೀದಿ ದೀಪದ ಕಂಟ್ರೋಲ್ ಅಳವಡಿಸಲು ಕ್ರಮಕೈಗೊಳ್ಳಬೇಕೆಂದು ತಿಳಿಸಿಲಾಯಿತು.*

**(ಕ್ರಮ :ಶಾಖಾಧಿಕಾರಿ, ಬದನವಾಳು)**

7. **ಶ್ರೀಯುತ ವಿದ್ಯಾಸಾಗರ, ಚಿಕ್ಕಯ್ಯನಛತ್ರ, ಅಹಲ್ಯ ಗ್ರಾಮ, ಮೊ.ಸಂ- 8792103855 ರವರು ಮಾತನಾಡಿ,**

* ಹಳ್ಳಿಕೆರೆಹುಂಡಿ ಗ್ರಾಮದ ಮಹದೇವಸ್ವಾಮಿ ದೇವಸ್ಥಾನಕ್ಕೆ ನಿರಂತರ ವಿದ್ಯುತ್ ಅನ್ನು ಕೊಡಿಸಿ.

* AHL98-21124 ರೂ. ಬಂದಿದೆ ಇದನ್ನು ಸರಿಪಡಿಸಿಕೊಡಿ.

* ಹೆಡಿಯಾಲ, ಬಂಕಳ್ಳಿ, ಹಾದನೂರು ಒಡೆಯನಪುರದಲ್ಲಿ 150 ಭಾಗ್ಯಜ್ಯೋತಿ ಮನೆಗೆ ಕರೆಂಟ್ ಕಟ್ ಮಾಡಿರುವ ಸಿದ್ದರಾಜು, ಮೇಸ್ತ್ರಿ & ಕರಿಬುದ್ದಿ, ಜಿವಿಪಿ ರವರು ಗ್ರಾಹಕರ ಜೊತೆ ಸೌಜನ್ಯದಿಂದ ವರ್ತಿಸಿರುವುದಿಲ್ಲ, ಅವರ ಮೇಲೆ ಕ್ರಮ ಕೈಗೊಳ್ಳಿ.

* ಎಲ್ಲಾ ಶಾಖೆಗಳಲ್ಲಿ ಎಷ್ಟು ಕಂಬಗಳ ಮೇಲೆ ಕೇಬಲ್ ಎಳೆಯಲಾಗಿದೆ ಎಂಬ ಮಾಹಿತಿ ಬೇಕು.

➢ *ಊರಿನಿಂದ ಹೊರಗಡೆ ಇರುವ ಸ್ಥಾವರಗಳಿಗೆ ನಿಗಮದ ವತಿಯಿಂದ ನಿರಂತರ ಜ್ಯೋತಿ ವಿದ್ಯುತ್ ಒದಗಿಸಲು ಸಾಧ್ಯವಿರುವುದಿಲ್ಲ. ಹಾಗೂ ಈ ಸ್ಥಾವರಗಳಿಗೆ ನಿರಂತರ ವಿದ್ಯುತ್ ಸಂಪರ್ಕವನ್ನು ಸ್ವಯಂ ನಿರ್ವಹಣೆ ಕಾಮಗಾರಿ ಅಡಿಯಲ್ಲಿ ಪಡೆಯುವಂತೆ ಸೂಚಿಸಲಾಯಿತು.*

**(ಕ್ರಮ:ಶಾಖಾಧಿಕಾರಿ, ಹುಲ್ಲಹಳ್ಳಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಂಜನಗೂಡು ಉಪವಿಭಾಗ 2)**
**(ಕ್ರಮ: ಶಾಖಾಧಿಕಾರಿ, ಬದನವಾಳು, ಹುಲ್ಲಹಳ್ಳಿ, ಹುರ, ಚಂದ್ರವಾಡಿ, ತಗಡೂರು)**

೮. **ಶ್ರೀಯುತ ಮಹದೇವ ಹೆಚ್.ಬಿ, ಹಂಪಾಪುರ ಗ್ರಾಮ. ಮೊ.ಸಂ-9740406792 ರವರು ಮಾತನಾಡಿ.**

* ಗ್ರಾಮದಲ್ಲಿ ಹೊಸ ಮನೆಗಳು ನಿರ್ಮಾಣವಾಗಿರುತ್ತದೆ. ಅವುಗಳಿಗೆ ಹೊಸದಾಗಿ ಕಂಬಗಳು ಬೇಕಾಗಿದೆ, ಕಂಬವನ್ನು ಹಾಕಿಸಿಕೊಡಿ ಮತ್ತು ವಿದ್ಯುತ್ ಸಂಪರ್ಕವನ್ನು ನೀಡಬೇಕಾಗಿ ಕೋರಿದರು.
* ಮನೆ ಮೇಲೆ ಲೈನ್ ಹಾದು ಹೋಗಿದ್ದು ಅದನ್ನು ಸ್ಥಳಾಂತರಿಸಲು ಕೋರಿದರು.
* ಗ್ರಾಮದಲ್ಲಿನ ಅರಳ ಮರದ ಕೆಳಗೆ ಲೈನ್ ಇರುತ್ತದೆ. ಅದನ್ನು ಸ್ಥಳಾಂತರಿಸಲು ಕೋರಿದರು.

➢ *ಗ್ರಾಮದಲ್ಲಿ ಹೊಸದಾಗಿ ನಿರ್ಮಾಣವಾಗಿರುವ ಮನೆಗಳ ಮಾಲೀಕರು ಉಪವಿಭಾಗ ಕಛೇರಿಯಲ್ಲಿ ವಿದ್ಯುತ್ ಸಂಪರ್ಕಕ್ಕಾಗಿ ರಿಜಿಸ್ಟರ್ ಮಾಡಿಸಿದರೆ, ನಂತರ ಸ್ಥಳ ಪರಿಶೀಲಿಸಿ ವಿದ್ಯುತ್ ಸಂಪರ್ಕ ನೀಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಮದು ತಿಳಿಸಲಾಯಿತು.*

**(ಕ್ರಮ :ಶಾಖಾಧಿಕಾರಿ, ಬದನವಾಳು)**

9. **ಶ್ರೀಯುತ ನಾರಾಯಣ ಮಲ್ಲಹಳ್ಳಿ ಗ್ರಾಮ. ಮೊ.ಸಂ-9480557170 ರವರು ಮಾತನಾಡಿ.**

* ಹೆಮ್ಮರಗಾಲ ಪಂಚಾಯ್ತಿ 4 ಊರುಗಳಲ್ಲಿ ಕೆಲವು ಬೀದಿಗಳಲ್ಲಿ ಬೀದಿ ದೀಪ ಯಾವಾಗಲು ಉರಿಯುತ್ತಿದೆ.
* ಮಲ್ಲಹಳ್ಳಿ ಹೊಸ ಬಡಾವಣೆಯಲ್ಲಿ ಬೀದಿ ಕಂಬ ಇಲ್ಲ, ಮನೆಗಳಿಗೆ ವಿದ್ಯುತ್ ಇಲ್ಲದಿರುವುದರಿಂದ ಈ ಮನೆಗಳಿಗೆ ವಿದ್ಯುತ್ ಸಂಪರ್ಕವನ್ನು ನೀಡಬೇಕಾಗಿ ಕೋರಿದರು.

➢ *ಬೀದಿ ದೀಪಗಳ ನಿರ್ವಹಣೆ ಕಾರ್ಯವು ಪಂಚಾಯತಿ ವ್ಯಾಪ್ತಿಗೆ ಒಳಪಡುವುದರಿಂದ, ಪಂಚಾಯತಿಯವರೇ ಬೀದಿ ದೀಪದ ಕಂಟ್ರೋಲ್ ಅಳವಡಿಸಲು ಕ್ರಮಕೈಗೊಳ್ಳಬೇಕೆಂದು ತಿಳಿಸಿಲಾಯಿತು.*

➢ *ಗ್ರಾಮದಲ್ಲಿ ಹೊಸದಾಗಿ ನಿರ್ಮಾಣವಾಗಿರುವ ಮನೆಗಳ ಮಾಲೀಕರು ಉಪವಿಭಾಗ ಕಛೇರಿಯಲ್ಲಿ ವಿದ್ಯುತ್ ಸಂಪರ್ಕಕ್ಕಾಗಿ ರಿಜಿಸ್ಟರ್ ಮಾಡಿಸಿದರೆ, ನಂತರ ಸ್ಥಳ ಪರಿಶೀಲಿಸಿ ವಿದ್ಯುತ್ ಸಂಪರ್ಕ ನೀಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಮದು ತಿಳಿಸಲಾಯಿತು.*

10. **ಶ್ರೀಯುತ ಸೂರ್ಯಕುಮಾರ್ ಕಣ್ಣೇನೂರು  ಮೊ.ಸಂ 9164187933 ರವರು ಮಾತನಾಡಿ,**

* ಕೋಣನೂರಿನಲ್ಲಿ ಕುರುಬ ಜನಾಂಗ ಬೀದಿಯಲ್ಲಿ ಬಸ್ ಸ್ಟ್ಯಾಂಡ್ ಬಳಿ ಬೀದಿ ದೀಪ ಹಗಲು ಉರಿಯುತ್ತಿದೆ. ಅದಕ್ಕೆ ೩ ವೈರ್ ಹಾಕಿಸಿ ಕಂಟ್ರೋಲ್ ಮಾಡಿಸಿಕೊಡಿ ಎಂದು ಕೋರಿದರು
* ಮಾದನಹಳ್ಳಿ ಗ್ರಾಮ ಮುಂದೆ ಸಂಗಮ ರಸ್ತೆ ಪಕ್ಕ ಇರುವುದರಿಂದ ಪರಿವರ್ತಕವನ್ನು ಸ್ಥಳಾಂತರ ಮಾಡಿಸಿಕೊಡಿ ಎಂದು ಕೋರಿದರು
* ಸಿದ್ದಪ್ಪ ಮಾದನಹಳ್ಳಿ ಮನೆ ಬಾಗಿಲಿನಲ್ಲಿರುವ ಕಂಬ ಬದಲಿಸಿಕೊಡಿ ಎಂದು ಕೋರಿದರು.
* ಕಣ್ಣೇನೂರು ಗ್ರಾಮಕ್ಕೆ ಎಂ.ಕೆ ರವಿಶಂಕರ್ ಮತ್ತು ನಂದೀಶ್ ಕುಮಾರ್ ರವರ ಗದ್ದೆಯ ಬಳಿ ಹೆಚ್ಚುವರಿ ಪರಿವರ್ತಕವನ್ನು ಮಾಡಿಸಿ ಕೊಡಿ ಎಂದು ಕೋರಿದರು.

➢ *ಬೀದಿ ದೀಪಗಳ ನಿರ್ವಹಣೆ ಕಾರ್ಯವು ಪಂಚಾಯತಿ ವ್ಯಾಪ್ತಿಗೆ ಒಳಪಡುವುದರಿಂದ, ಪಂಚಾಯತಿಯವರೇ ಬೀದಿ ದೀಪದ ಕಂಟ್ರೋಲ್ ಅಳವಡಿಸಲು ಕ್ರಮಕೈಗೊಳ್ಳಬೇಕೆಂದು ತಿಳಿಸಿಲಾಯಿತು.*

**(ಕ್ರಮ :ಶಾಖಾಧಿಕಾರಿ, ಚಂದ್ರವಾಡಿ)**

11. **ಶ್ರೀಯುತ ಚಿಕ್ಕಣ್ಣ ಹಗಿನವಾಳು ಮೊ.ಸಂ 8970612047 ರವರು ಮಾತನಾಡಿ,**

* ಹುಲ್ಲಹಳ್ಳಿ ಶಾಖಾ ಕಛೇರಿಯಲ್ಲಿನ ಡಿ.ಗ್ರೂಪ್ ನೌಕರರು, ಕಿರಿಯ ಇಂಜಿನಯರ್ ರವರು ಇಲ್ಲದೇ ಇರುವ ಸಂದರ್ಭದಲ್ಲಿ, ಕಛೇರಿಗೆ ಬಂದ ಗ್ರಾಹಕರೊಂದಿಗೆ ಸೌಜನ್ಯದಿಂದ ವರ್ತಿಸುತ್ತಿರುವುದಿಲ್ಲ, ಡಿ.ಗ್ರೂಪ್ ನೌಕರರು ಹೆಚ್ಚು ವರ್ಷಗಳಿಂದ ಒಂದೇ ಶಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವುದರಿಂದ ಈ ರೀತಿ ವರ್ತಿಸುತ್ತಿದ್ದು ಇವರನ್ನು ಬೇರೆ ಶಾಖೆಗಳಿಗೆ ಬದಲಿಸಿಕೊಡಿ ಎಂದು ಕೋರಿದರು

**(ಕ್ರಮ : ಶಾಖಾಧಿಕಾರಿ, ಹುಲ್ಲಹಳ್ಳಿ)**

12. **ಶ್ರೀಯುತ ಮಹದೇವಸ್ವಾಮಿ ಹೆಚ್.ಜಿ., ದೇವರಾಯಶೆಟ್ಟಿಪುರ ಮೊ.ಸಂ 9900501517 ರವರು ಮಾತನಾಡಿ,**

* ಬಡವರ ಮನೆಗಳಲ್ಲಿ 100 ರೂ ಬಿಲ್ ಕಟ್ಟಿದ್ದರೂ ಡಿಸ್ ಕನೆಕ್ಟ್ ಮಾಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.
* ಕೊತ್ತನಹಳ್ಳಿ ರಸ್ತೆ ಬಳಿ ಕಂಬಗಳ ಮೇಲೆ ಬಳ್ಳಿ ಹಬ್ಬಿದ್ದು, ಅದನ್ನು ತೆರವುಗೊಳಿಸಿ.
* ದೇವರಾಯಶೆಟ್ಟಿಪುರ ದಿಂದ ಕೊತ್ತಯ್ಯನಹುಂಡಿಗೆ ಹೋಗುವ ರಸ್ತೆಯಲ್ಲಿ 63 ಕೆವಿಎ ಪರಿವರ್ತಕವು ಹಳ್ಳದಲ್ಲಿದ್ದು ಈ ಪರಿವರ್ತಕವನ್ನು ಸ್ಥಳಾಂತರ ಮಾಡಿಕೊಡಿ. ಈ ಪರಿವರ್ತಕದ ಮೇಲೆ 10 ರಿಂದ 11 ಐಪಿ ಸೆಟ್ ಗಳು ಇರುವುದರಿಂದ ಅಧಿಕಭಾರ ಆಗಿ , ವೋಲ್ಟೇಜ್ ಸಮಸ್ಯೆ ಇದೆ. ಬೇರೆ ಪರಿವರ್ತಕ ಹಾಕಿಸಿಕೊಡಿ ಎಂದು ಕೋರಿದರು.

➢ *ವಿದ್ಯುತ್ ಬಿಲ್‌ನ ಬಾಕಿ ಹಣ ಇದ್ದರೆ ಡಿಸ್ ಕನೆಕ್ಟ್ ಮಾಡಲಾಗುತ್ತದೆ. ಹಣವನ್ನು ಸರಿಯಾದ ಸಮಯಕ್ಕೆ ಪಾವತಿ ಮಾಡಿದರೆ ಡಿಸ್ ಕನೆಕ್ಟ್ ಮಾಡುವುದಿಲ್ಲ ಎಂದು ತಿಳಿಸಲಾಯಿತು.*

**(ಕ್ರಮ : ಶಾಖಾಧಿಕಾರಿ, ಹುರ)**

13. **ಶ್ರೀಯುತ ರಾಜೇಶ್ ಹರದನಹಳ್ಳಿ ಮೊ.ಸಂ 9945158132 ರವರು ಮಾತನಾಡಿ,**

* ಹರದನಹಳ್ಳಿ ಗ್ರಾಮ ಮನೆಗಳಿಗೆ ವಿದ್ಯುತ್ ಸರಬರಾಜು ಬೇಕು ಎಂದು ಕೋರಿದರು.
* ಆಕಳ ಗ್ರಾಮದಲ್ಲಿ ರಸ್ತೆ ಮಧ್ಯ ವಿದ್ಯುತ್ ಕಂಬಗಳಿದ್ದು ಅವನ್ನು ಸರಿಪಡಿಸಿಕೊಡಿ ಎಂದು ಕೋರಿದರು.
* ಪಂಚಾಯ್ತಿ ಬಳಿ ಮನೆ ಮೇಲೆ ವಿದ್ಯುತ್ ಲೈನ್ ಇದೆ ಅದನ್ನು ತೆರವುಗೊಳಿಸಿಕೊಡಿ ಎಂದು ಕೋರಿದರು.

➢ *ಗ್ರಾಮದಲ್ಲಿನ ಮನೆಗಳ ಮಾಲೀಕರು ಉಪವಿಭಾಗ ಕಛೇರಿಯಲ್ಲಿ ವಿದ್ಯುತ್ ಸಂಪರ್ಕಕ್ಕಾಗಿ ರಿಜಿಸ್ಟರ್ ಮಾಡಿಸಿದರೆ, ನಂತರ ಸ್ಥಳ ಪರಿಶೀಲಿಸಿ ವಿದ್ಯುತ್ ಸಂಪರ್ಕ ನೀಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಯಿತು.*

**(ಕ್ರಮ : ಶಾಖಾಧಿಕಾರಿ, ಚಂದ್ರವಾಡಿ)**

14. **ಶ್ರೀಯುತ ಮಾದಪ್ಪ ಎ.ಪಿ.ಎಂ.ಸಿ. ಸದಸ್ಯರು, ಹುಲ್ಲಹಳ್ಳಿ, ಮೊ.ಸಂ 9448021199 ರವರು ಮಾತನಾಡಿ,**

* ಹುಲ್ಲಹಳ್ಳಿಯಲ್ಲಿನ ಸಮುದಾಯ ಭವನ ಮತ್ತು ಶನಿಮಾಹಾತ್ಮ ದೇವಸ್ಥಾನಕ್ಕೆ ವಿದ್ಯುತ್ ಸರಬರಾಜು ನೀಡಿ.
* ಊರಿನ ಹೊರಗಡೆ ಸೋಮೇಶ್ವರ ದೇವಸ್ಥಾನ ಇದ್ದು, ಆರ್.ಆರ್.ನಂಬರ್ ಹೊಂದಿದ್ದು ನಿರಂತರ ಜ್ಯೋತಿ ವಿದ್ಯುತ್ ಸರಬರಾಜು ಕೊಡಿ.
* ಊರಿನ ಹೊರಗಡೆ ಇರುವ ಮನೆಗಳಿಗೆ ನಿರಂತರ ವಿದ್ಯುತ್ ಸರಬರಾಜು ಇರುವುದಿಲ್ಲ ಹತ್ತಿರಲ್ಲಿದ್ದರೆ ನೀಡಬಹುದೇ ಎಂಬ ಬಗ್ಗೆ ಮಾಹಿತಿ ಕೊಡಿ.
* ನಂಜನಗೂಡಿನಿಂದ ಹುಲ್ಲಹಳ್ಳಿಗೆ ಹೋಗುವ ರಸ್ತೆಯಲ್ಲಿ ಇರುವ ಖಾಲಿ ಕಂಬಗಳನ್ನು ತೆರವುಗೊಳಿಸಿ.
* ನಂಜನಗೂಡಿನಿಂದ ಹುಲ್ಲಹಳ್ಳಿಗೆ ಹೋಗುವ ರಸ್ತೆಯಲ್ಲಿ ಇರುವ ಕಂಬಗಳಿಗೆ ಹಬ್ಬಿರುವ ಬಳ್ಳಿ ತೆಗೆಸಿಕೊಡಿ.
* ಹುಲ್ಲಹಳ್ಳಿ ಶಾಖೆಗೆ 24 X 7 ಅಲ್ಲಿಯೇ ಖಾಯಂ ಸಿಬ್ಬಂದಿ ಮಾಡಿಸಿಕೊಡಿ.

➢ ಸಮುದಾಯ ಭವನ ಮತ್ತು ಶನಿಮಾಹಾತ್ಮ ದೇವಸ್ಥಾನಕ್ಕೆ *ಉಪವಿಭಾಗ ಕಛೇರಿಯಲ್ಲಿ ವಿದ್ಯುತ್ ಸಂಪರ್ಕಕ್ಕಾಗಿ ರಿಜಿಸ್ಟರ್ ಮಾಡಿಸಿದರೆ, ನಂತರ ಸ್ಥಳ ಪರಿಶೀಲಿಸಿ ವಿದ್ಯುತ್ ಸಂಪರ್ಕ ನೀಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಯಿತು.*

➢ *ಊರಿನಿಂದ ಹೊರಗಡೆ ಇರುವ ಸ್ಥಾವರಗಳಿಗೆ ನಿಗಮದ ವತಿಯಿಂದ ನಿರಂತರ ಜ್ಯೋತಿ ವಿದ್ಯುತ್ ಒದಗಿಸಲು ಸಾಧ್ಯವಿರುವುದಿಲ್ಲ. ಹಾಗೂ ಈ ಸ್ಥಾವರಗಳಿಗೆ ನಿರಂತರ ವಿದ್ಯುತ್ ಸಂಪರ್ಕವನ್ನು ಸ್ವಯಂ ನಿರ್ವಹಣೆ ಕಾಮಗಾರಿ ಅಡಿಯಲ್ಲಿ ಪಡೆಯುವಂತೆ ಸೂಚಿಸಲಾಯಿತು.*

➢ ಹುಲ್ಲಹಳ್ಳಿ ಶಾಖೆಗೆ 24 X 7 ಅಲ್ಲಿಯೇ ಖಾಯಂ ಸಿಬ್ಬಂದಿ ನೇಮಿಸಲು ನಿಗಮದ ನಿಯಮಾನುಸಾರ ಈಗ ಸಾಧ್ಯವಿರುವುದಿಲ್ಲ. ಯಾವುದೇ ದೂರುಗಳಿದ್ದರೂ ಶಾಖಾಧಿಕಾರಿಗಳಿಗೆ ತಿಳಿಸಿ ಪರಿಹರಿಸಿಕೊಳ್ಳಬಹುದು.

**(ಕ್ರಮ : ಶಾಖಾಧಿಕಾರಿ, ಹುಲ್ಲಹಳ್ಳಿ)**

**ಶ್ರೀಯುತ ವಿಜಯ್ ಕುಮಾರ್, ಹುರಾ, ಮೊ.ಸಂ 7353427194 ರವರು ಮಾತನಾಡಿ,**
ನಾಲ್ಕು ಹಾಡಿಗಳಾದ ಕೊತ್ತನಹಳ್ಳಿ, ಡೋರನಕಟ್ಟೆ, ವೆಂಕಟಗಿರಿ, ಚಿಲಕಳ್ಳಿ 2000 ಕುಟುಂಬಗಳಿಗೆ ವಿದ್ಯುತ್ ಇಲ್ಲ.

**(ಕ್ರಮ : ಶಾಖಾಧಿಕಾರಿ, ಹುರಾ)**

16. **ಶ್ರೀಯುತ ಮಹೇಶ್ ಕೋಣನೂರು ಮೊ.ಸಂ: 9964857445 ರವರು ಮಾತನಾಡಿ,**
   * ಗ್ರಾಮದ ಮೂರು ತೋಟದ ಮನೆಗಳಿಗೆ ಜನ ಮನೆಗಳಿಗೆ ನಿರಂತರ ಜ್ಯೋತಿ ವಿದ್ಯುತ್ ಇಲ್ಲ. ಈ ಮನೆಗಳಿಗೆ ವಿದ್ಯುತ್ ದೊರಕಿಸಿಕೊಡಿ ಎಂದು ಕೋರಿದರು.

➢ *ಊರಿನಿಂದ ಹೊರಗಡೆ ಇರುವ ಸ್ಥಾವರಗಳಿಗೆ ನಿಗಮದ ವತಿಯಿಂದ ನಿರಂತರ ಜ್ಯೋತಿ ವಿದ್ಯುತ್ ಒದಗಿಸಲು ಸಾಧ್ಯವಿರುವುದಿಲ್ಲ. ಹಾಗೂ ಈ ಸ್ಥಾವರಗಳಿಗೆ ನಿರಂತರ ವಿದ್ಯುತ್ ಸಂಪರ್ಕವನ್ನು ಸ್ವಯಂ ನಿರ್ವಹಣೆ ಕಾಮಗಾರಿ ಅಡಿಯಲ್ಲಿ ಪಡೆಯುವಂತೆ ಸೂಚಿಸಲಾಯಿತು.*

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ).,
ಸೆಸ್ಕ್, ಕಾರ್ಯ ಮತ್ತು ಪಾಲನಾ ಉಪವಿಭಾಗ-2,
ನಂಜನಗೂಡು.

**ಪ್ರತಿಯನ್ನು:**
1. ಅಧೀಕ್ಷಕ ಇಣಜಿನಯರ್ (ವಿ), ಕಾ & ಪಾ ವೃತ್ತ. ಮೈಸೂರುರವರ ಅವಗಾಹನೆಗಾಗಿ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್ ಕಾರ್ಯ ಮತ್ತು ಪಾಲನಾ ವಿಭಾಗ ನಂಜನಗೂಡುರವರ ಅವಗಾಹನೆಗಾಗಿ.
3. ಶಾಖಾಧಿಕಾರಿಗಳು ಕಾರ್ಯ ಮತ್ತು ಪಾಲನಾ ಘಟಕ ಹುಲ್ಲಹಳ್ಳಿ/ಹುರ/ಚಂದ್ರವಾಡಿ/ತಗಡೂರು/ಬದನವಾಳು ಶಾಖೆರವರಿಗೆ ಸೂಕ್ತ ಕ್ರಮ ಕೈಗೊಳ್ಳಲು.
4. ಮು.ಕ/ಸ.ಇಂ(ತಾ)